ಮನೆ ಬಾಗಿಲಲ್ಲೇ ಸೇವಾ ಸೌಲಭ್ಯ

ಗ್ಯಾಸ್ ಸ್ಟವ್, ವ್ಹಿಕ್ಸಿ, ಕುಕ್ಕರ್ ಜಾರ್, ಪಂಪ್ ಸ್ಟವ್ ಮತ್ತಿತರ ಅಡಿಗೆ ಮನೆಯಲ್ಲಿ ಬಳಸುವ ಸಾಧನಗಳ ದುರಸ್ತಿಯನ್ನು ನಿಮ್ಮ ಮನೆ ಬಾಗಿಲಲ್ಲೇ ಮಾಡಿಕೊಡಲಾಗುವುದು. ದೂರವಾಣಿ ಕರೆ ಮಾಡಿ ಸಂಪರ್ಕಿಸಿದ ಅರ್ಧ ಗಂಟೆಯೊಳಗೆ ಸೇವೆ ಲಭ್ಯ. ಅಗತ್ಯವಾದಲ್ಲಿ ಸಂಪರ್ಕಿಸಿ

ಮಂಜು– 953530417, 8618187339

13ನೇ ವರ್ಷದಲ್ಲಿ

ಹಾಸನ ವಾಣಿ

http://hassanvani.epapertoday.com ಸಂಪಾದಕರು ಲೀಲಾವತಿ E-mail:hassanvani@gmail.com

'ಕೈ' ನಾಯಕಿ ನಿವಾಸದ ಮೇಲೆ ಸಿಬಿಐ ದಾಳಿ

ಚೆನ್ನೈ:ಸೆ,9– ತಮಿಳುನಾಡಿನ ಕಾಂಗ್ರೆಸ್ ನಾಯಕಿ ಜಯಂತಿ ನಟರಾಜನ್ ಅವರ ನಿವಾಸದ ಮೇಲೆ ಸಿಬಿಐ ಅಧಿ ಕಾರಿಗಳು ದಾಳಿ ನಡೆಸಿದ್ದು, ಅಲ್ಲದೆ ಕ್ರಿಮಿನಲ್ ಪಿತೂರಿ ಮತ್ತು ಅಧಿಕೃತ ಸ್ಥಾನದ ನಂದನೆ ಆರೋಪದಡಿ ಸೆಕ್ಷನ್ 120ಬಿ ಅಡಿಯಲ್ಲಿ ಎಫ್‌ಐಆರ್ ದಾಖಲಿಸಿದೆ. ದಾಳಿ ವೇಳೆ ಕೆಲ ದಾಖಲೆಗಳ ಪರಿಶೀಲನೆ ನಡೆಸಿರುವ ಸಿಬಿಐ ಅಧಿಕಾರಿಗಳು ಜಯಂತಿ ನಟರಾಜನ್ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ. ಜಯಂತಿ ಅವರು 2009ರಿಂದ 2014ರವರೆಗೆ ಕೇಂದ್ರದಲ್ಲಿ ಯುಪಿಎ ಸರ್ಕಾರ ಅಸ್ತಿತ್ವದಲ್ಲಿದ್ದಾಗ ಕೇಂದ್ರ ಪುಸರ ಖಾತೆ ಸಚಿವರಾಗಿದ್ದರು.

ಹಾಸನವಾಣಿ ಕನ್ನಡ ದಿನಪತ್ರಿಕೆ DAILY ಸಂಪುಟ:13 ಸಂಚಿಕೆ 187, ಭಾನುವಾರ, 10–09–2017,ದೂ.ಸಂಖ್ಯೆ 265898,ಬೆಲೆ ರೂ 1.50, ಪುಟ 4 RNI-16681/2004 KA/SK/HSN-/753/2017-2019

'ಪರಿಸರ ಉಳಿಸಿ ಜೀವಸಂಕುಲ ಸಂರಕ್ಷಿಸಿ'

ಹಾಸನ:ಸೆ,9–ಪ್ರಕೃತಿಯನ್ನು ದೇವರಂತೆ ಕಾಣಬೇಕು. ಪರಿಸರದಲ್ಲಿರುವ ಗಿಡ ಮರಗಳ ಉಳಿಸಿ ರಕ್ಷಿಸುವ ಮನಸು ಪ್ರತಿ ಯೊಬ್ಬರ ಮನದಲ್ಲಿ ಪುಟಿದೇಳ ಬೇಕು ಎಂದು ಜಿಲ್ಲಾ ಪಂಚಾ ಯತ್ ಸದಸ್ಯ ಹೆಚ್.ಪಿ.ಸ್ವರೂಪ್ ಅಭಿಪ್ರಾಯ ಪಟ್ಟರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ಏಕಲವ್ಯ ರೋವರ್ ಮುಕ್ತದಳ ಹಾಗೂ ಸರ್ಕಾರಿ ಕಲಾ ವಾಣಿಜ್ಯ ಕಾಲೇಜಿನ ಹಾಸನಾಂಬ ರೋವರ್ ಘಟಕದ ಸಂಯುಕ್ತ ಆಶಯದಲ್ಲಿ ತಾಲೂಕಿನ ತೇಜೂರು ಗ್ರಾಮದ ಕೆರೆಯ ಏರಿಬದಿಗಳಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಪರಿಸರ ಉಳಿಸಿ ಜೀವಸಂಕುಲ ಸಂರಕ್ಷಿಸಿ ನಿಮಿತ್ತ ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಪರಿಸರ ಸಂರಕ್ಷಣೆ ವಿಚಾರ ಬಹಳ ವಿಸ್ತಾರವಾಗಿದೆ. ಹಾಗಾಗಿ ಪರಿಸರವನ್ನು ಉಳಿಸಿ ಸಂರಕ್ಷಿಸಲು ಸಮುದಾಯದ ಪ್ರತಿಯೊಬ್ಬರು ಪಾಲ್ಗೊಂಡು ಶ್ರಮದಾನದ ಮೂಲಕ ಜೀವ ಸಂಕುಲಕ್ಕೆ ಆಸರೆಯಾಗಿರುವ ಭೂಮಿಯನ್ನು ರಕ್ಷಿಸಿಕೊಳ್ಳಲು ಯುವಜನತೆ ಆಂದೋಲನದ ರೀತಿಯಲ್ಲಿ ಸೇವೆ ಸಲ್ಲಿಸಲು ಮುಂದಾಗಬೇಕಿದೆ ಎಂದರು.

ಜಂಟಿ ಕಾರ್ಯದರ್ಶಿ ಹೆಚ್. ಜಿ.ಕಾಂಚನಮಾಲ ಮಾತನಾಡಿ ನಮ್ಮನ್ನು ಹೊತ್ತಿರುವ ಭೂಮಿಯು ಮನುಷ್ಯನ ದುರಾಸೆಯ ಫಲವಾಗಿ ಬರಿದಾಗುತ್ತಿದೆ. ಭೂಮಿಯ ಮೇಲೆ ಗಿಡ ಮರಗಳ ಹಸಿರು ಹೊದಿಕೆಯಂತಿದ್ದ ಭೂ ತಾಯಿ ಗಿಡ ಮರಗಳಿಲ್ಲದೆ ವ್ಯತಿರಿಕ್ತ ಪರಿಣಾಮಗಳನ್ನು ತಂದೊಡ್ಡಿದೆ. ಇಂತಹ ಸಮಯದಲ್ಲಿ ಯುವ ಜನತೆಯ ಸೇವೆ ಅನಿವಾರ್ಯ ವಾಗಿದೆ. ಹಾಗಾಗಿ ಸಮುದಾಯಕ್ಕೆ ಆಸರೆಹಾಗಿನಿಲ್ಲಬೇಕೆಂದರು . ಕರ್ನಾಟಕ ರಕ್ಷಣ ವೇದಿಕೆ ಮಹಿಳಾ ಘಟಕದ ಹೆಚ್. ಎಸ್.ರೇಖ ಮಾತನಾಡಿ ನಮ್ಮ ಪೂರ್ವಜರಂತೆ ನಾವು ಕೂಡ ಗಿಡಮರಗಳಲ್ಲಿ ದೇವರನ್ನು ಕಾಣಬೇಕು ಆಗ ಮಾತ್ರ ಎಲ್ಲರ ಬದುಕು ಹಸನಾಗುತ್ತದೆ ಎಂದರು ಕಾರ್ಯಕ್ರಮದಲ್ಲಿ 20ಕ್ಕೂ ಹೆಚ್ಚು ರೋವರ್ಸ್ ಪಾಲ್ಗೊಂಡು ಹೊಂಗೆ, ಬೇವು, ಹಿಪ್ಪೆ, ಸುರ ಹೊನ್ನೆ, ಅಮುರ ಹಾಗೂ ವಿವಿಧ ಜಾತಿಯ ಗಿಡಗಳನ್ನು ಕೆರೆಯ ಬದಿಗಳಲ್ಲಿ ನೆಡಲಾಯಿತು. ಈ ವೇಳೆ ದೊಡ್ಡಗದ್ದಳ್ಳಿ ಪಿ.ಎಲ್.ಡಿ. ಬ್ಯಾಂಕ್ ಮಾಜಿ ಅಧ್ಯಕ್ಷ ವಿರೂಪಾಕ್ಷಪ್ಪ ಹಾಗೂ ತೇಜೂರು ಗ್ರಾಮಸ್ತರು ಪಾಲ್ಗೊಂಡಿದ್ದರು.

ಮಹಾಮಳೆಗೆ ರಾಜ್ಯಾದ್ಯಂತ 10 ಮಂದಿ ಬಲಿ

ಬೆಂಗಳೂರು:ಸೆ,9– ರಾಜಧಾನಿ ಬೆಂಗಳೂರು ಸೇರಿ ದಂತೆ ಕರ್ನಾಟಕ ರಾಜ್ಯಾ ದ್ಯಂತ ಮಳೆ ಅಬ್ಬರ ಮುಂದು ವರೆದಿದ್ದು, ಮಹಾಮಳೆಗೆ ರಾಜ್ಯದಲ್ಲಿ 10 ಮಂದಿ ಬಲಿ ಯಾಗಿದ್ದಾರೆ ಎಂದು ವರದಿ ಯಾಗಿದೆ.

ಕಲಬುರ್ಗಿ ತಾಲ್ಲೂಕಿನ ಸಣ್ಣೂರಿನಲ್ಲಿ ಅತೀ ಹೆಚ್ಚು ಅಂದರೆ 19 ಸೆಂ.ಮೀ ಮಳೆಯಾಗಿದ್ದು, ಜೇವರ್ಗಿ ಪಟ್ಟಣದ ಲೋಕೋಪ ಯೋಗಿ ಇಲಾಖೆ ಕಚೇರಿಗೆ ತೆರಳುವ ರಸ್ತೆ ಮಧ್ಯದಲ್ಲಿನ ಸೇತುವೆ ಕೊಚ್ಚಿಕೊಂಡು ಹೋಗಿದೆ. ಯಾದಗಿರಿ ತಾಲ್ಲೂಕಿನ ಬಾಚವಾರದಲ್ಲಿ ಸಿಡಿಲು ಬಡಿದು 7 ಮೇಕೆಗಳು ಮೃತಪಟ್ಟಿವೆ. ಬಳಿಚಕ್ರ, ಹತ್ತಿಕುಣಿ ಹೋಬಳಿಯಲ್ಲಿ 30 ಮನೆಗಳು ಕುಸಿದಿವೆ ಎಂದು ವರದಿಯಾಗಿದೆ. ಇದಲ್ಲದೆ ಕೊಪ್ಪಳ ಜಿಲ್ಲೆಯ ಕುಷ್ಟಗಿ ಮತ್ತು ಯಲಬುರ್ಗಾ ತಾಲ್ಲೂಕಿನಲ್ಲಿ ಭಾರಿ ಮಳೆಯಾಗಿದೆ. ಸಿಂಧನೂರು ರಸ್ತೆಯಲ್ಲಿ ಬರುವ ಎರೆಹಳ್ಳಕ್ಕೆ ಪ್ರವಾಹ ಉಂಟಾಗಿದ್ದರಿಂದ ಬಿಜಕಲ್ ಬಳಿಯ ರಾಜ್ಯ ಹೆದ್ದಾರಿ ಸೇತುವೆ ಮೇಲೆ ನೀರು ಹರಿದು ಕೆಲ ಹೊತ್ತು ರಸ್ತೆ ಸಂಚಾರ ಸ್ಥಗಿತಗೊಂಡಿತ್ತು.

ಇನ್ನು ಹಾಸನ ಜಿಲ್ಲೆ ಅರಸೀಕೆರೆ ನಗರದಲ್ಲಿ ಗುರುವಾರ ಸಂಜೆ ಭಾರಿ ಮಳೆ ಸುರಿದಿದ್ದು, ಹಲವು ಮನೆಗಳ ಗೋಡೆಗಳು ಕುಸಿದಿವೆ. 10 ವರ್ಷಗಳ ನಂತರ ಬಿದ್ದಿರುವ ದಾಖಲೆ ಮಳೆ ಇದಾಗಿದ್ದು, ನಗರದಲ್ಲಿ 97 ಮಿ.ಮೀ, ಬಾಣಾವರ 41 ಮಿ.ಮೀ, ಗಂಡಸಿ 65 ಮಿ.ಮೀ, ಯಳವಾರೆಯಲ್ಲಿ 98 ಮಿ.ಮೀ, ಕಣಕಟ್ಟೆಯಲ್ಲಿ 8.8 ಮಿ.ಮೀ ಮಳೆಯಾಗಿದೆ ಎಂದು ಹವಾಮಾನ ಇಲಾಖೆ ಮೂಲಗಳು ತಿಳಿಸಿವೆ.

ವಿಜಯಪುರ ಜಿಲ್ಲೆ ಇಂಡಿ ತಾಲ್ಲೂಕಿನ ಝಳಕಿಯಲ್ಲಿ 15.2 ಸೆಂ.ಮೀ, ಚಡಚಣ ಪಟ್ಟಣದಲ್ಲಿ 12.7 ಸೆಂ.ಮೀ. ಮಳೆ ದಾಖಲಾಗಿದೆ. ಎಂಟು ವರ್ಷಗಳ ಬಳಿಕ ಚಡಚಣದ ಬೋರಿಹಳ್ಳ ಮೈದುಂಬಿ ಹರಿಯುತ್ತಿದೆ. ಬರಡೋಲ ಗ್ರಾಮದಲ್ಲಿ 27 ಮನೆಗಳಿಗೆ ಹಾನಿಯಾಗಿದೆ ಎಂದು ತಿಳಿದುಬಂದಿದೆ. ಜಿಗಜಿಣಗಿಯಲ್ಲೂ ಮನೆಗಳಿಗೆ ಹಾನಿಯಾಗಿದ್ದು, ಬಳ್ಳಾರಿ ಜಿಲ್ಲೆಯ ಕುರುಗೋಡಿನಲ್ಲಿ ಮನೆ ಗೋಡೆ ಕುಸಿದಿದೆ. ಕುರುಗೋಡು ಪಟ್ಟಣದಲ್ಲಿ 3.6 ಸೆಂ.ಮೀ ಮಳೆ ದಾಖಲಾಗಿದೆ.

ಧಾರಾಕಾರ ಮಳೆಯಿಂದ ಈ ಭಾಗದ ಬಹುತೇಕ ಹಳ್ಳಕೊಳ್ಳಗಳು ತುಂಬಿವೆ. ಮದಿರೆ ಗ್ರಾಮದ ಬಳಿ ಹರಿಯುವ ಹಿರೇಹಳ್ಳ ತುಂಬಿ ಸೇತುವೆಯ ಮೇಲೆ ಹರಿದ ಪರಿಣಾಮ ಮದಿರೆ ಮತ್ತು ಕೋಳೂರು ನಡುವೆ ಸಂಚಾರಕ್ಕೆ ಅಡ್ಡಿಯಾಯಿತು.

ಶಿವಮೊಗ್ಗ ನಗರ, ತೀರ್ಥಹಳ್ಳಿ, ಹೊಸನಗರ ಹಾಗೂ ಸಾಗರ, ಚಿತ್ರದುರ್ಗ ನಗರ, ಚಿಕ್ಕಜಾಜೂರು, ದಾವಣಗೆರೆ ಜಿಲ್ಲೆ ಹರಪನಹಳ್ಳಿ ಹಾಗೂ ಸುತ್ತಮುತ್ತ ಶುಕ್ರವಾರ ಉತ್ತಮ ಮಳೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಾಧ್ವಿಗಳ ಹಾಸ್ಟೆಲ್‌ಗೆ ಸಂಪರ್ಕ ಕಲ್ಪಿಸುವ ಸುರಂಗ ಪತ್ತೆ!

ಸಿರ್ಸಾ:ಸೆ,9– ಬಾಬಾ ರಾಮ್ ರಹೀಮ್ ಅವರ ಡೇರಾ ಕ್ಯಾಂಪಸ್ ನಲ್ಲಿ ನಡೆಯುತ್ತಿರುವ ಶೋಧ ಕಾರ್ಯಾಚರಣೆ ವೇಳೆ ರಾಮ್ ರಹೀಮ್ ಅವರ ಗೂಫಾದಿಂದ ಸಾಧ್ವಿಗಳ ಹಾಸ್ಟೆಲ್‌ಗೆ ಸಂಪರ್ಕ ಕಲ್ಪಿಸುವ ಸುರಂಗ ಪತ್ತೆಯಾಗಿದೆ.

ಇದೇ ವೇಳೆ ಅಕ್ರಮ ಪಟಾಕಿ ಕಾರ್ಖಾನೆ ಹಾಗೂ ರಾಸಾಯನಿಕಗಳೂ ಸಹ ಪತ್ತೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಡೇರಾ ಸಚ್ಚಾದ ಮುಖ್ಯಸ್ಥ ಇದ್ದ ಗೂಫಾದಲ್ಲಿ ಸುರಂಗ ಪತ್ತೆಯಾಗಿದ್ದು, ಇದು ಬಾಬಾ ರಾಮ್ ರಹೀಮ್ ನ ಮಹಿಳಾ ಭಕ್ತರು ಇರುವ ಸಾಧ್ವಿ ನಿವಾಸಕ್ಕೆ ನೇರ ಸಂಪರ್ಕ ಕಲ್ಪಿಸುತ್ತದೆ ಎಂದು ಮಾಹಿತಿ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪ ನಿರ್ದೇಶಕ ಸತೀಶ್ ಮೆಹ್ರಾ ಮಾಹಿತಿ ನೀಡಿದ್ದಾರೆ. ಅಷ್ಟೇ ಅಲ್ಲದೇ ಡೇರಾ ಕ್ಯಾಂಪಸ್ ನ ಸುತ್ತಮುತ್ತಲ ಪ್ರದೇಶದಲ್ಲಿ ಅಕ್ರಮ ಪಟಾಕಿ ಕಾರ್ಖಾನೆ ಇರುವುದೂ ಪತ್ತೆಯಾಗಿದ್ದು, ಕಾರ್ಟಿಡ್ಜ್ ಗಳನ್ನಿಡುವ ಖಾಲಿ ಬಾಕ್ಸ್ ಹಾಗೂ ಎಕೆ 47 ನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಮೆಹ್ರಾ ಮಾಹಿತಿ ನೀಡಿದ್ದಾರೆ.

ಸಕಲೇಶಪುರ ತಾಲ್ಲೂಕು ಮುಂಜ್ರಾಬಾದ್ ಕೋಟೆ ಸಮೀಪ ಹಲವಾರು ವರ್ಷಗಳಿಂದ ಬಿ.ಎಂ ರಸ್ತೆಯಲ್ಲಿ ವಹಿವಾಟು ನಡೆಸುತ್ತಿದ್ದ ಪೆಟ್ಟಿಗೆ ಅಂಗಡಿಗಳು, ಹೊಟೇಲ್ ಗಳನ್ನು ಇಂದು ಬೆಳಗ್ಗೆ ಸ್ಥಳೀಯ ಗ್ರಾಮ ಪಂಚಾಯಿತಿ ವತಿಯಿಂದ ಪೊಲೀಸ್ ನೆರವಿನೊಂದು ಇಂದು ಬೆಳಗ್ಗೆ ತೆರವು ಮಾಡಲಾಯಿತು.

ಮೂರು ಗ್ರಾಪಂ ಪಿ.ಡಿ.ಓಗಳ ಅಮಾನತು

ಹಾಸನ:ಸೆ,9– ಕರ್ತವ್ಯ ಲೋಪ ಎಸಗಿದ ಆರೋಪದ ಹಿನ್ನಲೆಯಲ್ಲಿ ಹಾಸನ ಜಿಲ್ಲಾ ಪಂಚಾಯಿತಿಯ ಮೂವರು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ಸೇವೆಯಿಂದ ಅಮಾನತ್ತುಗೊಳಿಸಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಕೆ,ಎಂ ಜಾನಕಿ ಆದೇಶ ಹೊರಡಿಸಿದ್ದಾರೆ

ಅರಸೀಕೆರೆ ತಾಲ್ಲೂಕು ಜಾವಗಲ್ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಎಸ್ .ಸಿ ವಿರುಪಾಕ್ಷ, ಚನ್ನರಾಯಪಟ್ಟಣ ತಾಲ್ಲೂಕು ಅಕ್ಕನಹಳ್ಳಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಬಿ.ವಿ. ಮಂಜುನಾಥ್, ಹಾಗೂ ಇದೇ ಗ್ರಾಮ ಪಂಚಾಯಿತಿ ಯಲ್ಲಿ ಅವ್ಯವಹಾರ ಎಸಗಿದ ಆರೂಪದ ಮೇಲೆ ಹಾಲಿ ಚನ್ನರಾಯಪಟ್ಟಣ ತಾಲ್ಲೂಕು ಬೆಕ್ಕ ಗ್ರಾಮಪಂಚಾ ಯತ್ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಶಿವ ಕುಮಾರ್ ಅವರನ್ನು ಸೇವೆ ಯಿಂದ ಅಮಾನತುಗೊಳಿಸ ಲಾಗಿದೆ.ಈ ಮೂವರು ಮೇಲೆ ಹಣ ದುರುಪಯೋಗ ,ಕೆಲಸದ ನಿರ್ಲಕ್ಷತೆ ಮತ್ತು ಬೇಜ ವಾಬ್ದಾರಿತನ ಹಾಗೂ ನಿಗಧಿ ಪಡಿಸಿದ ಗುರಿಗಳನ್ನು ಸಮರ್ಪಕವಾಗಿ ಅನುಷ್ಠಾನ ಗೊಳಿಸದಿರುವ ಆರೋಪಗಳ ಹಿನ್ನಲೆಯಲ್ಲಿ ಸೇವೆಯಿಂದ ಅಮಾನತ್ತು ಗೊಳಿಸಲಾಗಿದೆ ಎಂದು ಜಿಲ್ಲಾ ಪಂಚಾಯತ್ ಅದೇಶದಲ್ಲಿ ತಿಳಿಸಲಾಗಿದೆ.

ಚನ್ನಕೇಶವ ದೇವಾಲಯಕ್ಕೆ ಮುಜರಾಯಿ ಸಚಿವ ರುದ್ರಪ್ಪಲಮಾಣಿ ಭೇಟಿ

ಬೇಲೂರು:ಸೆ,9–ಇತಿಹಾಸ ಪ್ರಸಿದ್ಧ ಚನ್ನಕೇಶವ ದೇವಾಲಯದ ಹೆಚ್ಚಿನ ಅಭಿವೃದ್ಧಿಗೆ ರಾಜ್ಯ ಧಾರ್ಮಿಕ ಪರಿಷತ್ ಅಧಿಕಾರಿಗಳೊಂದಿಗೆ ಚರ್ಚಿಸಿ ಹೆಚ್ಚಿನ ಅನುದಾನ ಬಿಡುಗಡೆ ಮಾಡಲಾಗುವುದು ಎಂದು ಮುಜರಾಯಿ ಸಚಿವ ರುದ್ರಪ್ಪಲಮಾಣಿ ತಿಳಿಸಿದರು.

ಅವರಿಂದು ಪಟ್ಟಣದ ಚನ್ನಕೇಶವ ದೇವಾಲಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತ ನಾಡಿದ ಅವರು, ದೇವಾಲಯದ ಗೋಪುರಗಳನ್ನು ಪಾಲಿಶ್ ಮಾಡಲು ಹೆಚ್ಚಿನ ಹಣವನ್ನು ಬಿಡುಗಡೆ ಮಾಡುವುದಾಗಿ ತಿಳಿಸಿ ದರು. ಈಗಾಗಲೇ ದೇವಾಲಯಕ್ಕೆ 900 ವರ್ಷ ಪೂರ್ಣಗೊಂಡಿದ್ದು ಸಾವಿರ ವರ್ಷಕ್ಕೆ ಕಾಲಿಡುತ್ತಿರುವ ಸಂದರ್ಭದಲ್ಲಿ ಈ ದೇವಾಲಯ ವನ್ನು ಪ್ರಪಂಚದಾದ್ಯಂತ ತಿಳಿಸುವ ಕೆಲಸವನ್ನು ಮಾಡಬೇಕೆಂದು ಈಗಾಗಲೇ ಆಯೋಜನೆ ರೂಪಿ ಸಲಾಗಿದೆ ಎಂದು ಹೇಳಿದದರು.

ದೇವಾಲಯವು 900ವರ್ಷ ಪೂರ್ಣ ಗೊಂಡಿರುವುದರಿಂದ ಅರ್ಥಪೂರ್ಣ ಕಾರ್ಯಕ್ರಮವನ್ನು ಆಯೋಜನೆ ಮಾಡಿಸಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವರೊಂ ದಿಗೆ ಚರ್ಚಿಸಿ, ದಿನಾಂಕ ನಿಗಧಿ ಪಡಿ ಸಲಾಗುವುದು ಎಂದು ತಿಳಿಸಿದರು.

ದೇವಾಲಯದ ಆಸ್ತಿ ಒತ್ತುವರಿಯಾಗಿದ್ದರೆ ಶೀಘ್ರವಾಗಿ ಪರಿಶೀಲಿಸಿತೆರವುಗೊಳಿಸಿ ರಕ್ಷಿಸಲಾಗುವುದು ಎಂದರು.

ರಾಜ್ಯದಲ್ಲಿ ನೂರಾರು ಕೋಟಿ ರೂ. ಆಧಾಯ ಕೊಡುವ ದೇವಾಲಯಗಳಿದ್ದರೂ ಅಲ್ಲಿ ಸಮರ್ಪಕ ಆಡಳಿತ ನಿರ್ವಹಣೆಗೆ ಅಧಿಕಾರಿಗಳು ಇಲ್ಲದ ಕಾರಣ ತಕ್ಷಣಕ್ಕೆ ನಿವೃತ್ತ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವ ಉದ್ದೇಶ ಸರಕಾರಕ್ಕಿದೆ ಎಂದು ಸಚಿವರು ಹೇಳಿದರು.

ಮಹಿಳೆಯರಿಗೆ ರಂಗೋಲಿ ಸ್ಪರ್ಧೆ

ಹಾಸನ:ಹ[redacted]ಬಸ್‌ನಿಲ್ದಾಣ ರಸ್ತೆ ಬಳಿ ಪ್ರತಿಷ್ಠಾಪಿ ಸ[redacted]ದ ಗಣೇಶೋತ್ಸವದ ಅಂಗವಾಗಿ [redacted] ಉದ್ಯಾನವನದಲ್ಲಿ ಮಹಿಳೆಯರಿಗ[redacted]ರ್ಧಡಿಸಲಾಗಿತ್ತು.25ಕ್ಕೂ ಹೆಚ್ಚಿನ ಮಹಿಳೆ[redacted]ಗಳಲ್ಲಿ ಭಾಗವಹಿಸಿದರು. ತಮ್ಮದೆ ಆದ [redacted]ಡಿಸುವುದರ ಮೂಲಕ ನೋಡುಗರ [redacted]ತ್ತಮವಾಗಿ ರಂಗೋಲಿ ಬಿಡಿಸಿದವರಿಗ[redacted]ಷಿಸ ಲಾಯಿತು.ಈ ಸಂದರ್ಭದಲ್ಲಿ [redacted]ಲ್ಲಾ ಸಂಘಟಕಿ ರಾಣಿ, ಸಮಾಜ ಸೇವ[redacted]ರರು ಉಪಸ್ಥಿತರಿದ್ದರು.

ಶೌಚಾಲಯ ನಿರ್ಮಿಸಿಕೊಳ್ಳುವಂತೆ ಅರಿವು

ಹೊಳೆನರಸೀಪುರ:ಸೆ,9– ಅಣ್ಣೇ ಚಾಕನ ಹಳ್ಳಿ ಗ್ರಾಮದ ಮನೆ ಮನೆಗೆ ತೆರಳಿ ಮಹಿಳೆಯರಿಗೆ ಯುವತಿ ಯರಿಗೆ ಶಾಲಾ ಮಕ್ಕಳಿಗೆ ಗುಲಾಬಿ ಹೂ ನೀಡುವ ಮೂಲಕ ಪ್ರತಿ ಮನೆಗಳಲ್ಲಿ ಶೌಚಾಲಯ ನಿರ್ಮಿಸಿ ಕೊಳ್ಳುವಂತೆ ಜಿ.ಪಂ. ಮುಖ್ಯ ಕಾರ್ಯ ನಿರ್ವಹಣಾಧಿ ಕಾರಿ ಎಂ.ಜಾನಕಿ ಪ್ರೋತ್ಸಾಹಿಸಿದರು.

ತಾಲ್ಲೂಕಿನ ಹಳ್ಳಿಮೈಸೂರು ಹೋಬಳಿಯ ದೊಡ್ಡಕಾಡನೂರು ಗ್ರಾ.ಪಂ. ವ್ಯಾಪ್ತಿಯ ಅಣ್ಣೇ ಚಾಕನಹಳಳಿ ಗ್ರಾಮಕ್ಕೆ ಅವರು ಭೇಟಿ ನೀಡಿ ಪರಿಶೀಲಿಸಿದರು. ಗ್ರಾಮದ ಎಲ್ಲಾ ಬೀದಿಗಳಿಗೆ ಸಂಚರಿಸಿ ಮನೆ ಮನೆಗೆ ತೆರಳಿ ಶೌಚಾಲಯ ನಿರ್ಮಿಸಿರುವವರನ್ನು ಅಭಿನಂದಿಸಿದರು. ಶೌಚಾಲಯ ಗಳನ್ನು ನಿರ್ಮಿಸದೆ ಇರುವವರಿಗೆ ಮನವರಿಕೆ ಮಾಡಿಕೊಟ್ಟು ಕಡ್ಡಾಯವಾಗಿ ಶೌಚಾಲಯವನ್ನು

ನಿರ್ಮಿಸಿಕೊಳ್ಳಿ ಎಂದು ಸಲಹೆ ನೀಡಿದರು. ಗ್ರಾಮದ ಎಲ್ಲಾ ಸದಸ್ಯರು ಆರೋಗ್ಯದಿಂದ ಇರ ಬೇಕಾದರೆ ಸ್ವಚ್ಛತೆ ಅತ್ಯಗತ್ಯ.ಆದ್ದರಿಂದ ಪ್ರತಿ ಯೊಬ್ಬರು ಶುಚಿಯಾದ ಶೌಚಾ ಲಯ ನಿರ್ಮಿಸಿ ಮತ್ತು ಗ್ರಾಮದ ಎಲ್ಲಾ ಬೀದಿಗಳಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಂಡು ಚರಂಡಿ, ರಸ್ತೆ, ನಿರ್ಮಿಸಿಕೊಂಡು, ಆದರ್ಶ ಗ್ರಾಮವಾಗಿ ನಿರ್ಮಾಣ ವಾಗುವ ನಿಟ್ಟಿನಲ್ಲಿ ಎಲ್ಲರು ಪ್ರಯತ್ನಿಸಿ ಎಂದು ಮಾಹಿತಿ ನೀಡಿದರು. ಹೊಬಳಿಯ ಹೆಚ್.ಹಿಂದಲ ಹಳ್ಳಿ, ಮತ್ತಿತರ ಗ್ರಾಮಗಳಿಗೆ ತೆರಳಿ ಅರಿವು ಮೂಡಿಸಿದರು.

ನದಿಗಳ ರಕ್ಷಿಸಿ ಅಭಿಯಾನ

ಚನ್ನರಾಯಪಟ್ಟಣ:ಸೆ,9– ಗೊಮ್ಮಟಸಿಟಿ ಫೌಂಡೇಶನ್ ಫಾರ್ ಪಬ್ಲಿಕ್ ವೆಲ್‌ಫೇರ್ ಅಂಡ್ ಎನ್ವಿರಾನ್‌ಮೆಂಟ್ ಕೇರ್ ವತಿಯಿಂದ ನದಿಗಳನ್ನು ರಕ್ಷಿಸಿ ಅಭಿಯಾನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು.

ಪಟ್ಟಣದ ಹೊಸ ಬಸ್ ನಿಲ್ದಾಣ ದಿಂದ ಪ್ರಾರಂಭಗೊಂಡ ಜಾಥ ನವೋದಯ ವೃತ್ತ, ಹಳೇಬಸ್ ನಿಲ್ದಾಣದಿಂದ ಮೈಸೂರು ರಸ್ತೆ ಮಾರ್ಗವಾಗಿ ಜಾಥಾ ನಡೆಯಿತು.

ಗೊಮ್ಮಟಸಿರಿ ಫೌಂಡೇಶನ್ ಅಧ್ಯಕ್ಷ ಚೇತನ್ ಮಾತನಾಡಿ, ರಾಷ್ಟ್ರಾದ್ಯಂತ ಸದ್ಗುರು ರವರ ನೇತೃತ್ವದಲ್ಲಿ ದೂರದೃಷ್ಟಿಯ ಚಿಂತನೆ ಫಲವಾಗಿ ಈಷಾ ಫೌಂಡೇಶನ್ ವತಿಯಿಂದ ರ್‍ಯಾಲಿ ರಿವರ್ ಫಾರ್ ಎಂಬ ಮಹತ್ವಕಾಂಕ್ಷಿ ಸಮಾಜ ಮುಖಿ ಕಾರ್ಯಕ್ರಮವನ್ನು ಮಾಡುತ್ತಿದೆ. ನದಿಗಳು ಭಾರತದ ಜೀವನಾಡಿಗಳು ಸಮೃದ್ಧ ಭಾರತದ ನಿರ್ಮಾಣಕ್ಕೆ ಇವುಗಳ ಮಹತ್ವ ಸಾಕಷ್ಟು ಇದೆ.ನದಿಗಳ ರಕ್ಷಣೆ ನಮ್ಮೆಲ್ಲರ ಕರ್ತವ್ಯ ಈ ನದಿಗಳು ಜೀವಸಂಕುಲಕ್ಕೆ, ಜೀವಾಮೃತವಾಗಿದೆ ಎಂದರು.

ರೈತರು ದೇಶದ ಬೆನ್ನೆಲುಬಾದರೆ ರೈತರ ಬೆನ್ನೆಲಬು ಈ ನದಿಗಳು ಇಂತಹ ನದಿಗಳನ್ನು ಉಳಿಸಲು ಹಲವಾರು ಗಣ್ಯಾತಿಗಣ್ಯರು ಒಗ್ಗೂಡಿದ